# ಯುವ ಜನತೆ ಮತ್ತು ಸಾಮಾಜಿಕ ಮಾಧ್ಯಮ ಒಂದು ಅಧ್ಯಯನ

**ನಯಾಜ್ ಅಹ್ಮದ್***

**DOI: https://doi.org/10.5281/zenodo.22300406**

**ABSTRACT**

ಸಾಮಾಜಿಕ ಮಾಧ್ಯಮ ಎಂಬುದು ಆಧುನಿಕ ಸಮೂಹ ಮಾಧ್ಯಮಗಳ ಪ್ರಕಾರಗಳಲ್ಲೊಂದು. ಸಮೂಹ ಮಾಧ್ಯಮಗಳ ಪ್ರಕಾರಗಳಲ್ಲಿ ಇತ್ತೀಚಿನದಾಗಿದ್ದರೂ ಜಗತ್ತಿನಾದ್ಯಂತ ಮಿಲಿಯಾಂತರ ಜನರ ಮೇಲೆ ಮೋಡಿ ಮಾಡಿರುವ ಹಾಗೂ ಮೋಹಕ ಪ್ರಭಾವ ಬೀರಿರುವ ಖ್ಯಾತಿ ಅದಕ್ಕಿದೆ. ದಿನದಿಂದ ದಿನಕ್ಕೆ ಅದನ್ನು ಬಳಕೆ ಮಾಡುತ್ತಿರುವವರ ಸಂಖ್ಯೆ ಒಂದೇ ಸಮನೆ ಏರುತ್ತಲಿದೆ. ''ಸೋಷಿಯಲ್ ಮೀಡಿಯಾ'' ಆವಿಷ್ಕಾರವಾದದ್ದೇ ಒಂದೆರಡು ದಶಕಗಳ ಇತ್ತೀಚೆಗೆ. ಅರ್ಥಾತ್ 21ನೇ ಶತಮಾನದ ಆರಂಭದಿಂದ ಎನ್ನಬಹುದು.

ಪ್ರಸ್ತುತ ಅಧ್ಯಯನವು ಯುವ ಜನತೆಯ ಮೇಲೆ ಸಮೂಹ ಮಾಧ್ಯಮಗಳ ಪ್ರಭಾವವನ್ನು ತಿಳಿಯುವುದಾಗಿದೆ. ಈ ಅಧ್ಯಯನಕ್ಕೆ ಪೂರಕವಾಗಿ ಚಿಕ್ಕಮಗಳೂರು ಜಿಲ್ಲೆಯ ಅಜ್ಜಂಪುರ ತಾಲ್ಲೂಕಿನ ಅಜ್ಜಂಪುರ ಪಟ್ಟಣದ 50 ಜನ ಯುವಕರನ್ನು ಆಯ್ಕೆಮಾಡಿಕೊಂಡು ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಪ್ರಸ್ತುತ ಅಧ್ಯಯನವು ಯುವ ಜನತೆಯ ಮೇಲೆ ಸಮೂಹ ಮಾಧ್ಯಮಗಳ ಪ್ರಭಾವದ ಕುರಿತು ಬೆಳಕು ಚೆಲ್ಲುವುದಾಗಿದೆ.

**KEYWORDS:** ಸಮೂಹ ಮಾಧ್ಯಮ, ಸಾಮಾಜಿಕ ಮಾಧ್ಯಮ, ಯುವ ಜನತೆ, ಯುವ ಸಂಸ್ಕೃತಿ.

* **ಡಾ. ನಯಾಜ್ ಅಹ್ಮದ್,** ಸಹ ಪ್ರಾಧ್ಯಾಪಕರು, ಸಮಾಜಶಾಸ್ತ್ರ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು, ಶಿವಮೊಗ್ಗ.

**ಪೀಠಿಕೆ:**

ಸಾಮಾಜಿಕ ಮಾಧ್ಯಮ ಎಂಬುದು ಆಧುನಿಕ ಸಮೂಹ ಮಾಧ್ಯಮಗಳ ಪ್ರಕಾರಗಳಲ್ಲೊಂದು. ಸಮೂಹ ಮಾಧ್ಯಮಗಳ ಪ್ರಕಾರಗಳಲ್ಲಿ ಇತ್ತೀಚಿನದಾಗಿದ್ದರೂ ಜಗತ್ತಿನಾದ್ಯಂತ ಮಿಲಿಯಾಂತರ ಜನರ ಮೇಲೆ ಮೋಡಿ ಮಾಡಿರುವ ಹಾಗೂ ಮೋಹಕ ಪ್ರಭಾವ ಬೀರಿರುವ ಖ್ಯಾತಿ ಅದಕ್ಕಿದೆ. ದಿನದಿಂದ ದಿನಕ್ಕೆ ಅದನ್ನು ಬಳಕೆ ಮಾಡುತ್ತಿರುವವರ ಸಂಖ್ಯೆ ಒಂದೇ ಸಮನೆ ಏರುತ್ತಲಿದೆ. "ಸೋಷಿಯಲ್ ಮೀಡಿಯಾ" ಆವಿಷ್ಕಾರವಾದದ್ದೇ ಒಂದೆರಡು ದಶಕಗಳ ಇತ್ತೀಚೆಗೆ. ಅರ್ಥಾತ್ 21ನೇ ಶತಮಾನದ ಆರಂಭದಿಂದ ಎನ್ನಬಹುದು. ಉದಾಹರಣೆಗೆ ಸಾಮಾಜಿಕ ಮಾಧ್ಯಮದ ಒಂದು ಪ್ರಕಾರವಾದ "ಫೇಸ್ ಬುಕ್" ಎಂಬುದು 2004ರಲ್ಲಿ ಮಾರ್ಕ್ ಜುಕರ್ ಬರ್ಗ್ ಎಂಬಾತನಿಂದ ಆರಂಭವಾಗಿದ್ದು ಅದು ಎಷ್ಟು ಬೇಗನೆ ಜನಪ್ರಿಯವಾಯಿತೆಂದರೆ, 2020–21ರ ಹೊತ್ತಿಗೆ ಅದು ಜಗತ್ತಿನಾದ್ಯಂತ ತಿಂಗಳೊಂದರ 2.7 ಮಿಲಿಯನ್ ಗಿಂತಲೂ ಅಧಿಕ ಬಳಕೆದಾರರನ್ನು ಹೊಂದಿತ್ತು. ಇತ್ತ ಭಾರತದ ಉದಾಹರಣೆಯನ್ನು ತೆಗೆದುಕೊಳ್ಳುವುದಾದರೆ ದೇಶದಾದ್ಯಂತ ಸೋಷಿಯಲ್ ಮೀಡಿಯಾ ಬಳಸುವವರ ಸಂಖ್ಯೆ 2013–14ರ ಹೊತ್ತಿಗೆ (ಅಂದರೆ ಸೋಷಿಯಲ್ ಮೀಡಿಯಾ ಆರಂಭವಾದ ಕೇವಲ 14–15 ವರ್ಷಗಳಲ್ಲಿ ) 127.5 ದಶಲಕ್ಷವನ್ನು ದಾಟಿತ್ತು ಅಂದರೆ ಜಗತ್ತಿನಾದ್ಯಂತ ಜನರು ಒಂದು ಬಗೆಯ "ಸಮೂಹ ಸನ್ನಿಗೆ" ಒಳಗಾದವರಂತೆ ಸೋಷಿಯಲ್ ಮೀಡಿಯಾಗಳ ಬೆನ್ನು ಹತ್ತಿ ಹೋಗುತ್ತಿದ್ದಾರೆ. ಇಂದಿನ ಯುವಕರಂತೂ ಅವುಗಳ ಹುಚ್ಚು ಹಿಡಿದವರಂತೆ ಅವುಗಳ ಹಿಂದಿದ್ದು ಅವುಗಳ ಬಳಕೆದಾರರ ಸಂಖ್ಯೆ ನಿರಂತರವಾಗಿ ಏರುತ್ತಲೇ ಇದೆ.

**ಸಮೂಹ ಮಾಧ್ಯಮ:**

ಸಮೂಹ ಮಾಧ್ಯಮವು ಆಧುನಿಕ ಸಮಾಜದಲ್ಲಿ ಬಹಳ ಮುಖ್ಯವಾಗಿದೆ. ಇದು ಹೆಚ್ಚಿನ ಸಂಖ್ಯೆಯ ಜನರಿಗೆ ಮಾಹಿತಿ, ವಿಚಾರಗಳು ಮತ್ತು ಸಂದೇಶಗಳನ್ನು ತಲುಪಿಸುತ್ತದೆ. "ಸಮೂಹ ಸಂವಹನ ಮತ್ತು ಸಮೂಹ ಮಾಧ್ಯಮವೆಂಬುದು ಬಹಳ ವಿಸ್ತಾರವಾದ ಪ್ರದೇಶದಲ್ಲಿ ಹರಡಿಕೊಂಡಿರುವ ವೈವಿಧ್ಯಮಯ ಶ್ರೋತೃಗಳಿಗೆ ತಲುಪುವಂತೆ ತರಬೇತಿ ಹೊಂದಿದ ವಿಶೇಷತಜ್ಞರು ವಿಸ್ತರಿಸುವ ಮಾಹಿತಿಯಾಗಿರುತ್ತದೆ". ಇದು ಸಾಮಾನ್ಯವಾಗಿ ಟೆಲಿವಿಷನ್, ರೇಡಿಯೋ, ಸಿನಿಮಾ, ವರ್ತಮಾನ ಪತ್ರಿಕೆಗಳು, ಪುಸ್ತಕಗಳು, ಮ್ಯಾಗಜೀನುಗಳು ಹಾಗೂ ನಿಯತಕಾಲಿಕೆಗಳು ಮೊದಲಾದವುಗಳನ್ನು ಒಳಗೊಂಡಿರುತ್ತವೆ. ಸಮೂಹ ಮಾಧ್ಯಮವು ಸಮಾಜದ ಅತ್ಯಗತ್ಯ ಅಂಗವಾಗಿದೆ. ಇದು ಮಾಹಿತಿ ನೀಡುವುದು, ಮನೋರಂಜನೆ ಒದಗಿಸುವುದು ಮತ್ತು ಸಾಮಾಜಿಕ ಹಾಗೂ ಪ್ರಜಾಪ್ರಭುತ್ವದ ಜೀವನದಲ್ಲಿ ಜನರ ಭಾಗವಹಿಸುವಿಕೆಗೆ ಸಹಾಯ ಮಾಡುವುದು ಮುಂತಾದ ಪ್ರಮುಖ ಕಾರ್ಯಗಳನ್ನು ನಿರ್ವಹಿಸುತ್ತದೆ.

**ಸಾಮಾಜಿಕ ಮಾಧ್ಯಮ:**

ಸಾಮಾಜಿಕ ಮಾಧ್ಯಮ ಎಂಬುದು ಸಮೂಹ ಮಾಧ್ಯಮದ ಒಂದು ವಿಶಿಷ್ಟ ಪ್ರಕಾರವಾಗಿದ್ದು 21ನೇ ಶತಮಾನದ ನಂತರದಲ್ಲಿ ಭಾರಿ ವೇಗದಿಂದ ಬೆಳೆಯುತ್ತಲಿದೆ ಹಾಗೂ ಪ್ರಭಾವಿಯಾಗುತ್ತಿದೆ. ಸಮೂಹ ಮಾಧ್ಯಮಗಳ ಒಟ್ಟಾರೆ ಪ್ರಭಾವ ಬೆಳೆಯುತ್ತಲಿದ್ದಂತೆ ಅದನ್ನು ಆದಷ್ಟು ಪ್ರಭಾವಿಯಾಗಿಸುವ ಹಾಗೂ ಅದರಲ್ಲಿಯೇ ಒಂದು ಬಗೆಯ ವಿಶಿಷ್ಟತೆಯನ್ನು ಕಂಡುಕೊಳ್ಳುವ ಪ್ರಯತ್ನ ಸೋಷಿಯಲ್ ಮೀಡಿಯಾದಲ್ಲಿದೆ ಅಲ್ಲದೇ ಸೋಷಿಯಲ್ ಮೀಡಿಯಾ ಎಂಬುದು ಜನರು ತಾವು ಇಚ್ಛಿಸಿದವರೊಂದಿಗೆ ಮಾತ್ರ ಸಂವಹನ ಮಾಡಲು ಹಾಗೂ ಅವರೊಂದಿಗೆ ನಿರಂತರ ಸಂಪರ್ಕದಲ್ಲಿರಲು ನಡೆಸಿದಂತಹ ತಾಂತ್ರಿಕ ಪ್ರಯೋಗದ ಫಲವಾಗಿ ಆವಿಷ್ಕಾರಗೊಂಡ ವಿದ್ಯುನ್ಮಾನ ಮಾಧ್ಯಮವಾಗಿದೆ. ಇದರ ಕಾರ್ಯಾಚರಣೆಯ ನೆಲೆ ಅಂತರ್ಜಾಲವೇ ಆಗಿರುವುದರಿಂದ ಅಂತರ್ಜಾಲದ ಸೌಲಭ್ಯವಿದ್ದಲ್ಲಿ ಮಾತ್ರ ಇದರ ಬಳಕೆ ಸಾಧ್ಯವಾಗಿದೆ. ಸೋಷಿಯಲ್ ಮೀಡಿಯಾ ಎಂದು ಕರೆಯಲಾಗುತ್ತಿರುವ ಈ ಮಾಧ್ಯಮಗಳು ಯಾವುದೇ ಪ್ರಾದೇಶಿಕ ಅಡೆತಡೆಗಳಿಲ್ಲದೇ ಜಾತಿ–ಮತ ಭೇಧವಿಲ್ಲದೆ ಜನರು ತಮ್ಮ ನಡುವೆ ನಿರಂತರವಾದ ಸಂಪರ್ಕವನ್ನಿರಿಸಿಕೊಳ್ಳಲು ನೆರವಾಗುವ ಆನ್ ಲೈನ್ ವೇದಿಕೆಗಳಾಗಿವೆ.

ಸಾಮಾಜಿಕ ಮಾಧ್ಯಮಗಳು ಸಾಮಾನ್ಯವಾಗಿ ಕಡಿಮೆ ಖರ್ಚಿನ ಮತ್ತು ವ್ಯಾಪಕವಾಗಿ ಲಭ್ಯವಿರುವ ಹಲವಾರು ವಿದ್ಯುನ್ಮಾನ ಉಪಕರಣಗಳಾಗಿದ್ದು ಇದು ಯಾರಿಗೇ ಆದರೂ ಮಾಹಿತಿಯನ್ನು ಪ್ರಕಟಿಸಲು ಇಲ್ಲವೇ ಸಂಗ್ರಹಿಸಲು ಸಾಮಾನ್ಯ ಪ್ರಯತ್ನವೊಂದರಲ್ಲಿ ಜೊತೆಗೂಡಿ ಕೆಲಸ ಮಾಡಲು ಅಥವಾ ಸಂಬಂಧಗಳನ್ನು ಬೆಳೆಸಲು ಸಹಾಯಕವಾಗಿದೆ. ಸಾಮಾಜಿಕ ಜಾಲತಾಣಗಳೆಂದರೆ, ಅದೊಂದು ಸಂಪರ್ಕದ, ಮನೋರಂಜನೆಯ ಹಾಗೂ ಮಾಹಿತಿಗಳ ಬೃಹತ್ ಕೋಶವಿದ್ದಂತೆ. ಉದಾ: ಫೇಸ್ ಬುಕ್, ಆರ್ಕುಟ್, ಗೂಗಲ್ ಪ್ಲಸ್, ಟ್ವೀಟರ್, ಫ್ರೆಂಡ್ ಸ್ಟರ್, ಇನ್ ಸ್ಟಾಗ್ರಾಮ್, ಯೂಟ್ಯೂಬ್, ಸ್ನ್ಯಾಪ್ ಚಾಟ್, ವಾಟ್ಸಾಪ್, ಲಿಂಕ್ಡ್ ಇನ್, ರೆಡಿಟ್ ಇತರೆ.

**ಯುವಜನತೆ ಅಥವಾ ಯುವಕರು:**

ಬಾಲ್ಯ ಮತ್ತು ಪ್ರೌಢಾವಸ್ಥೆಯ ನಡುವೆ ಇರುವ ಜೀವನದ ಹಂತ. ಈ ಅವಧಿಯಲ್ಲಿ ವ್ಯಕ್ತಿಯ ದೈಹಿಕ, ಮಾನಸಿಕ ಮತ್ತು ಭಾವನಾತ್ಮಕ ಬೆಳವಣಿಗೆ ವೇಗವಾಗಿ ನಡೆಯುತ್ತದೆ. ಯುವಜನತೆ ಒಂದು ಪ್ರಮುಖ ಪರಿವರ್ತನಾ ಹಂತವಾಗಿದ್ದು, ಇದರಲ್ಲಿ ದೈಹಿಕ, ಮಾನಸಿಕ ಮತ್ತು ಭಾವನಾತ್ಮಕ ಬೆಳವಣಿಗೆ, ಹೊಸ ಅನುಭವಗಳು ಮತ್ತು ಕಲಿಕೆ, ಉತ್ಸಾಹ ಸೃಜನಶೀಲತೆ ಮತ್ತು ಕನಸುಗಳನ್ನು ಕಾಣುವ ಹಂತವಾಗಿದೆ. ಯುವ ಜನತೆ ಎಂದರೆ 15ರಿಂದ 24ವರ್ಷ ವಯಸ್ಸಿನವರು". "ಯುವಜನತೆ ಎಂದರೆ ವ್ಯಕ್ತಿ ಪ್ರೌಢ ಜೀವನಕ್ಕೆ ಸಿದ್ಧಗೊಳ್ಳುವ ಪರಿವರ್ತನಾ ಹಂತ".

**ಯುವ ಸಂಸ್ಕೃತಿ:**

ಯುವ ಸಂಸ್ಕೃತಿ ಎಂದರೆ ಮಕ್ಕಳು, ಹದಿಹರೆಯದವರು ಮತ್ತು ಯುವ

ವಯಸ್ಕರ ಸಾಮಾಜಿಕ ರೂಢಿಗಳು, ನಡವಳಿಕೆಗಳು, ನಂಬಿಕೆಗಳು ಮತ್ತು ಆಸಕ್ತಿಗಳನ್ನು ಸೂಚಿಸುವ ಒಂದು ವಿಶಿಷ್ಟ ಸಂಸ್ಕೃತಿ. ಇದು ಮುಖ್ಯವಾಹಿನಿಯ ವಯಸ್ಕರ ಸಂಸ್ಕೃತಿಗಿಂತ ಭಿನ್ನವಾಗಿದ್ದು, ಫ್ಯಾಷನ್, ಸಂಗೀತ, ಭಾಷೆ ಮತ್ತು ಜೀವನ ಶೈಲಿಯಲ್ಲಿನ ಬದಲಾವಣೆಗಳನ್ನು ಪ್ರತಿಬಿಂಬಿಸುತ್ತದೆ. ಯುವ ಸಂಸ್ಕೃತಿ ಎಂದರೆ, ಯುವಕರ ಜೀವನಶೈಲಿ, ಆಲೋಚನೆ, ವರ್ತನೆ ಆಸಕ್ತಿಗಳು ಹಾಗೂ ಅವರು ಅನುಸರಿಸುವ ಫ್ಯಾಷನ್, ಸಂಗೀತ, ಭಾಷೆ ಮತ್ತು ಸಾಮಾಜಿಕ ಚಟುವಟಿಕೆಗಳು. ವ್ಯಾಖ್ಯಾನ: ಯುವ ಸಂಸ್ಕೃತಿ ಎಂದರೆ ಯುವಕರ ನಡುವೆ ಅಭಿವೃದ್ಧಿಯಾಗುವ ಸಂಸ್ಕೃತಿ. ಇದು ಅವರ ಆಲೋಚನೆಗಳು ಮತ್ತು ಜೀವನ ನಡೆಸುವ ರೀತಿಯನ್ನು ಪ್ರತಿಬಿಂಬಿಸುತ್ತವೆ.

**ಅಧ್ಯಯನದ ಮಹತ್ವ:**

- ಯುವಕರ ಸಂವಹನ, ಶಿಕ್ಷಣ, ಸ್ವ–ಅಭಿವ್ಯಕ್ತಿಯ ಮೇಲೆ ಪ್ರಭಾವ ಬೀರುತ್ತದೆ.
- ಸಾಮಾಜಿಕ ಸಂಬಂಧಗಳು ಮತ್ತು ಸಾಮಾಜಿಕ ಭಾಗವಹಿಸುವಿಕೆಯ ಮೇಲೆ ಪ್ರಭಾವ ಬೀರುತ್ತದೆ.

**ಅಧ್ಯಯನದ ಉದ್ದೇಶಗಳು:**

- ಯುವ ಜನತೆಯ ಮೇಲೆ ಸಾಮಾಜಿಕ ಮಾಧ್ಯಮದ ಪ್ರಭಾವವನ್ನು ತಿಳಿಯುವುದು.
- ಯುವಕರ ಅಥವಾ ಯುವ ಜನತೆಯ ಸಮಸ್ಯೆ ಮತ್ತು ಸವಾಲುಗಳನ್ನು ತಿಳಿಯುವುದು.

**ಸಂಶೋಧನಾ ವಿಧಾನ ಮತ್ತು ತಂತ್ರಗಳು:**

ಪ್ರಸ್ತುತ ಅಧ್ಯಯನದಲ್ಲಿ ಮಾಹಿತಿ/ದತ್ತಾಂಶ ಸಂಗ್ರಹಣೆಗಾಗಿ ವೈಜ್ಞಾನಿಕ ತಂತ್ರ ಸಾಧನಗಳನ್ನು ಬಳಸಿಕೊಂಡು ಪ್ರಾಥಮಿಕ ಮತ್ತು ಮಾಧ್ಯಮಿಕ ಮೂಲಗಳೆರಡರಿಂದಲೂ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಕ್ಷೇತ್ರ ಕಾರ್ಯವನ್ನು ಕೈಗೊಂಡು ಸಂಶೋಧನೆಗೆ ಅಗತ್ಯವಿರುವ ಮಾಹಿತಿಯನ್ನು ಅವಲೋಕನ ಹಾಗೂ ಸಂದರ್ಶನ ಅನುಸೂಚಿಯನ್ನು ಬಳಸಿಕೊಂಡು ನಮ್ಮ ಅಧ್ಯಯನ ಕ್ಷೇತ್ರದಲ್ಲಿ ಆಯ್ಕೆಯಾಗಿರುವ ಸಂದರ್ಶಿತರನ್ನು ಭೇಟಿಮಾಡಿ ನಾವೇ ಅವರಿಗೆ ಪ್ರಶ್ನೆಗಳನ್ನು ಕೇಳಿ ಮಾಹಿತಿಯನ್ನು ಸಂಗ್ರಹಿಸಲಾಗಿದೆ.

**ಅಧ್ಯಯನ ಕಾರ್ಯಕ್ಷೇತ್ರ ಮತ್ತು ಜನಸಂಖ್ಯಾ ಮಾದರಿಯ ಆಯ್ಕೆ:**

ಪ್ರಸ್ತುತ ಅಧ್ಯಯನವು ಚಿಕ್ಕಮಗಳೂರು ಜಿಲ್ಲೆಯ ಅಜ್ಜಂಪುರ ತಾಲ್ಲೂಕಿನ ಅಜ್ಜಂಪುರ ಪಟ್ಟಣವನ್ನು ಆಯ್ಕೆಮಾಡಿಕೊಳ್ಳಲಾಗಿದೆ. ಈ ಪಟ್ಟಣದಲ್ಲಿ 2000ಕ್ಕೂ ಅಧಿಕ ಕುಟುಂಬಗಳಿವೆ. ಇಲ್ಲಿನ ಒಟ್ಟು ಜನಸಂಖ್ಯೆ 10,000. ಇಲ್ಲಿನ ಪ್ರಧಾನ ಉದ್ಯೋಗ ಕೃಷಿ ಮತ್ತು ವ್ಯಾಪಾರ. ಈ ಪಟ್ಟಣದಲ್ಲಿರುವ 50 ಜನ ಯುವಕರನ್ನು

ಸರಳ ಯಾದೃಚ್ಛಿಕ ಮಾದರಿ ವಿಧಾನದಿಂದ ಆಯ್ಕೆಮಾಡಿಕೊಂಡು ಅಧ್ಯಯನ ಮಾಡಲಾಗಿದೆ.

**ಮಾಹಿತಿ ವಿಶ್ಲೇಷಣೆ:**

**ಕೋಷ್ಟಕ 01:** ಮಾಹಿತಿದಾರರ ವಯಸ್ಸಿಗೆ ಸಂಬಂಧಿಸಿದ ವಿವರ

| ವಯಸ್ಸು | ಆವೃತ್ತಿ | ಸರಾಸರಿ |
|---|---|---|
| 15 ರಿಂದ 20 ವರ್ಷ | 20 | 40% |
| 20 ರಿಂದ 30 ವರ್ಷ | 25 | 50% |
| 30 ರಿಂದ 40 ವರ್ಷ | 05 | 10% |
| ಒಟ್ಟು | 50 | 100.00% |

ಈ ಮೇಲಿನ ಕೋಷ್ಟಕದಲ್ಲಿ ಮಾಹಿತಿದಾರರ ವಯಸ್ಸಿಗೆ ಸಂಬಂಧಿಸಿದ ವಿವರಗಳನ್ನು ತಿಳಿಸಲಾಗಿದ್ದು, 15 ರಿಂದ 20 ವರ್ಷ ವಯಸ್ಸಿನವರ ಪ್ರಮಾಣ ಶೇಕಡ 40 ಇದ್ದು, 20 ರಿಂದ 30 ವರ್ಷ ವಯಸ್ಸಿನವರ ಪ್ರಮಾಣ ಶೇಕಡ 50 ಇದ್ದು, 30 ರಿಂದ 40 ವರ್ಷ ವಯಸ್ಸಿನವರ ಪ್ರಮಾಣ ಶೇಕಡ 10 ಇದೆ. ಸಾಮಾಜಿಕ ಮಾಧ್ಯಮವನ್ನು ಬಳಸುವವರು ಹೆಚ್ಚಿನವರು ಯುವಜನರಾಗಿದ್ದಾರೆ ಹಾಗಾಗಿ ವಯಸ್ಸು ಬಹಳ ಮುಖ್ಯವಾದ ಪಾತ್ರ ವಹಿಸುತ್ತದೆ. ಇಲ್ಲಿ 15 ರಿಂದ 20 ಹಾಗೂ 20 ರಿಂದ 30 ವರ್ಷ ವಯಸ್ಸಿನವರ ಪ್ರಮಾಣವೇ ಅಧಿಕವಾಗಿದೆ.

**ಕೋಷ್ಟಕ 02:** ಸಾಮಾಜಿಕ ಮಾಧ್ಯಮಗಳ ಬಳಕೆಯ ಮೇಲೆ ಕಳೆಯುವ ಸಮಯದ ವಿವರ

| ಕಳೆಯುವ ಸಮಯದ ವಿವರ | ಆವೃತ್ತಿ | ಸರಾಸರಿ |
|---|---|---|
| 02 ರಿಂದ 03 ಗಂಟೆ | 25 | 50% |
| 03 ರಿಂದ 04 ಗಂಟೆ | 20 | 40% |
| 04 ರಿಂದ 05 ಗಂಟೆ | 05 | 10% |
| ಒಟ್ಟು | 50 | 100.00% |

ಈ ಮೇಲಿನ ಕೋಷ್ಟಕದಲ್ಲಿ ಮಾಹಿತಿದಾರರು ಸಾಮಾಜಿಕ ಮಾಧ್ಯಮದಲ್ಲಿ ಕಳೆಯುವ ಸಮಯದ ವಿವರಕ್ಕೆ ಸಂಬಂಧಿಸಿದ ವಿವರಗಳನ್ನು ತಿಳಿಸಲಾಗಿದ್ದು, 02 ರಿಂದ 03 ಗಂಟೆ ಸಮಯವನ್ನು ಕಳೆಯುವವರ ಪ್ರಮಾಣ ಶೇಕಡ 50 ಇದೆ. 03 ರಿಂದ 04 ಗಂಟೆ ಸಮಯವನ್ನು ಕಳೆಯುವವರ ಪ್ರಮಾಣ ಶೇಕಡ 40 ಇದೆ. ಹಾಗೆಯೇ 04 ರಿಂದ 05 ಗಂಟೆ ಸಮಯವನ್ನು ಕಳೆಯುವವರ ಪ್ರಮಾಣ ಶೇಕಡ 10 ರಷ್ಟಿದೆ.

**ಕೋಷ್ಟಕ 03:** ಸಾಮಾಜಿಕ ಮಾಧ್ಯಮಗಳ ಬಳಕೆಯ ಕಾರಣಗಳ ವಿವರ

| ಬಳಕೆಯ ಕಾರಣದ ವಿವರ | ಆವೃತ್ತಿ | ಸರಾಸರಿ |
|---|---|---|
| ಸಂವಹನ | 15 | 30% |
| ಮನೋರಂಜನೆ | 20 | 40% |
| ಶಿಕ್ಷಣ ಮತ್ತು ಕಲಿಕೆ | 10 | 20% |
| ವಿಶ್ರಾಂತಿ | 05 | 10% |
| ಒಟ್ಟು | 50 | 100.00% |

ಈ ಮೇಲಿನ ಕೋಷ್ಟಕದಲ್ಲಿ ಸಾಮಾಜಿಕ ಮಾಧ್ಯಮಗಳ ಬಳಕೆಯ ಕಾರಣಗಳ ವಿವರಗಳನ್ನು ತಿಳಿಸಲಾಗಿದ್ದು, ಶೇಕಡ 30ರಷ್ಟು ಯುವಕರು ಸಂವಹನಕ್ಕಾಗಿ, ಶೇಕಡ 40ರಷ್ಟು ಯುವಕರು ಮನೋರಂಜನೆಗಾಗಿ, ಶೇಕಡ 20ರಷ್ಟು ಯುವಕರು ಶಿಕ್ಷಣ ಮತ್ತು ಕಲಿಕೆಗಾಗಿ, ಶೇಕಡ 10ರಷ್ಟು ಯುವಕರು ವಿಶ್ರಾಂತಿಗಾಗಿ ಎಂಬ ಮಾಹಿತಿಯನ್ನು ನೀಡಿರುತ್ತಾರೆ. ಮನೋರಂಜನೆಗಾಗಿ ಮತ್ತು ಸಂವಹನಕ್ಕಾಗಿ ಸಾಮಾಜಿಕ ಮಾಧ್ಯಮಗಳ ಬಳಕೆ ಹೆಚ್ಚಾಗಿದೆ.

**ಕೋಷ್ಟಕ 04:** ಸಾಮಾಜಿಕ ಮಾಧ್ಯಮಗಳ ಬಳಕೆಯ ದುಷ್ಪರಿಣಾಮಗಳ ವಿವರ

| ಬಳಕೆಯ ದುಷ್ಪರಿಣಾಮದ ವಿವರ | ಆವೃತ್ತಿ | ಸರಾಸರಿ |
|---|---|---|
| ಅತಿಯಾದ ಬಳಕೆ | 25 | 50% |
| ಮಾನಸಿಕ ಕ್ಷೇಮದ ಮೇಲೆ | 10 | 20% |
| ಸೈಬರ್ ಕಿರುಕುಳ/ಅಸುರಕ್ಷತೆ | 10 | 20% |
| ತಪ್ಪು ಮಾಹಿತಿ | 05 | 10% |
| ಒಟ್ಟು | 50 | 100.00% |

ಈ ಮೇಲಿನ ಕೋಷ್ಟಕದಲ್ಲಿ ಸಾಮಾಜಿಕ ಮಾಧ್ಯಮಗಳ ಬಳಕೆಯ ದುಷ್ಪರಿಣಾಮಗಳ ವಿವರಗಳನ್ನು ತಿಳಿಸಲಾಗಿದ್ದು, ಶೇಕಡ 50 ರಷ್ಟು ಯುವಕರು ಅತಿಯಾದ ಬಳಕೆಯನ್ನು ಮಾಡುತ್ತಾರೆ, ಶೇಕಡ 20ರಷ್ಟು ಯುವಕರ ಮಾನಸಿಕ ಆರೋಗ್ಯದ ಮೇಲೆ ಪರಿಣಾಮವಾಗಿದೆ ಎಂದಿದ್ದಾರೆ, ಶೇಕಡ 20ರಷ್ಟು ಯುವಕರು ಅಸುರಕ್ಷತೆ ಹಾಗೂ ಸೈಬರ್ ಕಿರುಕುಳ ಎಂದಿದ್ದಾರೆ, ಶೇಕಡ 10ರಷ್ಟು ಯುವಕರು ತಪ್ಪು ಮಾಹಿತಿಗಳೆಂದಿದ್ದಾರೆ. ಒಟ್ಟಾರೆಯಾಗಿ ನೋಡುವುದಾದರೆ ಸಾಮಾಜಿಕ ಮಾಧ್ಯಮಗಳ ಬಳಕೆ ಅತಿಯಾಗಿರುವುದು ಕಂಡುಬರುತ್ತದೆ.

**ಕೋಷ್ಟಕ 05:** ಯುವಕರು ಎದುರಿಸುತ್ತಿರುವ ಸಮಸ್ಯೆಗಳ ವಿವರ

ಯುವಕರು ವಿವಿಧ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಮತ್ತು ಉದ್ಯೋಗ ಸಂಬಂಧಿತ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಯುವಕರಿಗೆ ಸೂಕ್ತ ಉದ್ಯೋಗಗಳ

ಕೊರತೆ, ಬಡತನದ ಕಾರಣಕ್ಕಾಗಿ ಗುಣಮಟ್ಟದ ಶಿಕ್ಷಣ ಮತ್ತು ತರಬೇತಿಯನ್ನು ಪಡೆಯಲಾಗದ ಸ್ಥಿತಿ, ಉದ್ಯೋಗ, ಶಿಕ್ಷಣ ಮತ್ತು ಭವಿಷ್ಯದ ಬಗ್ಗೆ ಕುಟುಂಬದ ಒತ್ತಡ, ಸಾಮಾಜಿಕ ಮಾಧ್ಯಮಗಳ ಅತಿಯಾದ ಬಳಕೆ.

| **ಎದುರಿಸುತ್ತಿರುವ ಸಮಸ್ಯೆ ವಿವರ** | **ಆವೃತ್ತಿ** | **ಸರಾಸರಿ** |
|---|---|---|
| ಅತಿಯಾದ ಬಳಕೆ | 25 | 50% |
| ಮಾನಸಿಕ ಒತ್ತಡ | 10 | 20% |
| ಕುಟುಂಬದ ಒತ್ತಡ | 10 | 20% |
| ನಿರುದ್ಯೋಗ ಮತ್ತು ಬಡತನ | 05 | 10% |
| ಒಟ್ಟು | 50 | 100.00% |

ಈ ಮೇಲಿನ ಕೋಷ್ಟಕದಲ್ಲಿ ಯುವಕರು ಎದುರಿಸುತ್ತಿರುವ ಸಮಸ್ಯೆಗಳ ವಿವರಗಳನ್ನು ತಿಳಿಸಲಾಗಿದ್ದು, ಶೇಕಡ 50 ಯುವಕರು ಸಾಮಾಜಿಕ ಮಾಧ್ಯಮಗಳ ಅತಿಯಾದ ಬಳಕೆಯೆಂತಲೂ, ಶೇಕಡ 20ರಷ್ಟು ಯುವಕರು ಮಾನಸಿಕ ಒತ್ತಡ ಎಂತಲೂ, ಶೇಕಡ 20ರಷ್ಟು ಯುವಕರು ಕುಟುಂಬದ ಒತ್ತಡ ಎಂತಲೂ, ಶೇಕಡ 10ರಷ್ಟು ಯುವಕರು ನಿರುದ್ಯೋಗ ಮತ್ತು ಬಡತನ ಎಂತಲೂ ತಿಳಿಸಿರುತ್ತಾರೆ.

**ಅಧ್ಯಯನದಿಂದ ಲಭ್ಯವಾದ ಅಂಶಗಳು:**

- ಈ ಅಧ್ಯಯನದಿಂದ ತಿಳಿದು ಬಂದ ಅಂಶಗಳೇನೆಂದರೆ ಸಾಮಾಜಿಕ ಮಾಧ್ಯಮಗಳ ಬಳಕೆಯ ಪ್ರಮಾಣ 15 ವರ್ಷದಿಂದ 20 ವರ್ಷ ವಯಸ್ಸಿನವರ ಪ್ರಮಾಣ 40% ಹಾಗೂ 20ರಿಂದ 30 ವರ್ಷ ವಯಸ್ಸಿನವರ ಪ್ರಮಾಣ 50% ಕಂಡುಬಂದಿದೆ.
- ಸಾಮಾಜಿಕ ಮಾಧ್ಯಮಗಳ ಮೇಲೆ 02ರಿಂದ 03 ಗಂಟೆ ಕಾಲಕಳೆಯುವವರ ಪ್ರಮಾಣ 50% ಇದ್ದರೆ 03ರಿಂದ 04 ಗಂಟೆ ಕಾಲಕಳೆಯುವವರ ಪ್ರಮಾಣ 40% ಇದೆ.
- ಸಾಮಾಜಿಕ ಮಾಧ್ಯಮಗಳ ಬಳಕೆಯ ಕಾರಣಗಳ ಪರಿಣಾಮ ಸಂವಹನಕ್ಕಾಗಿ 30% ಹಾಗೂ ಮನೋರಂಜನೆಗಾಗಿ 40% ಬಳಕೆಮಾಡುತ್ತಾರೆ.
- ಸಾಮಾಜಿಕ ಮಾಧ್ಯಮಗಳ ಅತಿಬಳಕೆಯ ಪ್ರಮಾಣ 50% ಯುವಕರಲ್ಲಿ ಕಂಡುಬಂದಿದೆ.

**ಸಲಹೆಗಳು:**

- ಯುವಕರು ಎದುರಿಸುತ್ತಿರುವ ಸಮಸ್ಯೆಗಳನ್ನು ಕುಟುಂಬ, ಶಿಕ್ಷಣ ಸಂಸ್ಥೆಗಳು, ಸಮಾಜ ಮತ್ತು ಸರ್ಕಾರ ಒಟ್ಟಾಗಿ ಪ್ರಯತ್ನಿಸುವ ಮೂಲಕ ಪರಿಹರಿಸಬಹುದಾಗಿದೆ.

- ಯುವಕರಿಗೆ ಉತ್ತಮ ಶಿಕ್ಷಣ, ವೃತ್ತಿ ತರಬೇತಿ ಹಾಗೂ ಸಂವಹನ ಕೌಶಲ್ಯವನ್ನು ನೀಡುವುದು.
- ಯುವಕರಿಗೆ ಉದ್ಯೋಗಾವಕಾಶಗಳ ಸೃಷ್ಟಿ ಮಾಡುವುದು.
- ಯುವಕರು ಸ್ವಂತ ಉದ್ಯಮವನ್ನು ಪ್ರಾರಂಭಿಸಲು ಮಾರ್ಗದರ್ಶನ ಮತ್ತು ಹಣಕಾಸಿನ ನೆರವು.
- ಮಾನಸಿಕ ಆರೋಗ್ಯಕ್ಕೆ ಬೆಂಬಲ ನೀಡುವುದು.
- ಸಾಮಾಜಿಕ ಚಟುವಟಿಕೆಗಳಲ್ಲಿ ಯುವಕರ ಭಾಗವಹಿಸುವಿಕೆಯನ್ನು ಹೆಚ್ಚಿಸುವುದು.

**ಪರಾಮರ್ಶನ ಗ್ರಂಥಗಳು:**


1. ರಾಮ್ ಅಹುಜಾ, (2010), ಸೋಷಿಯಲ್ ಪ್ರಾಬ್ಲಮ್ಸ್ ಇನ್ ಇಂಡಿಯಾ, ಜೈಪುರ: ರಾವತ್ ಪಬ್ಲಿಕೇಷನ್ಸ್.
2. ವಿನಿತಾ ಪಾಂಡೆ, (2016), ಇಂಡಿಯನ್ ಸೊಸೈಟಿ ಅಂಡ್ ಕಲ್ಚರ್, ಜೈಪುರ: ರಾವತ್ ಪಬ್ಲಿಕೇಷನ್ಸ್.
3. ರಾಮ್ ಅಹುಜಾ, (2018), ರಿಸರ್ಚ್ ಮೆಥೆಡ್ಸ್, ಜೈಪುರ: ರಾವತ್ ಪಬ್ಲಿಕೇಷನ್ಸ್.
4. ಶಂಕರ್ ರಾವ್ ಚ.ನ., (2022–23), ದೈನಂದಿನ ಜೀವನದ ಸಮಾಜಶಾಸ್ತ್ರ, ಮಂಗಳೂರು: ಜೈ ಭಾರತ್ ಪ್ರಕಾಶನ.
5. ಶಂಕರ್ ರಾವ್ ಚ.ನ., (2023–24), ಅಂಚೀಕರಣಗೊಂಡ ಸಮೂಹಗಳ ಸಮಾಜಶಾಸ್ತ್ರ, ಮಂಗಳೂರು: ಜೈ ಭಾರತ್ ಪ್ರಕಾಶನ.